# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **38** |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 15-07-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಕೊರತೆ ಇದೆ; (ವಿವರ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದನೆಯಾಗುತ್ತಿದ್ದು ಯಾವುದೇ ಕೊರತೆಯಿರುವುದಿಲ್ಲ.<br>ರಾಜ್ಯದಲ್ಲಿ ಬೇಡಿಕೆಯ ದಿನವಹಿ ಸರಾಸರಿ ಪರಿಮಾಣವು ಏಪ್ರಿಲ್ -24 ರಿಂದ ಮೇ-24 ರ ಅಂತ್ಯದವರೆಗೆ 281.4 ಮಿ.ಯೂ ಗಳಾಗಿರುತ್ತದೆ. ವಿವಿಧ ಮೂಲಗಳಿಂದ ಲಭ್ಯವಾಗಿರುವ ವಿದ್ಯುತ್ ಪ್ರಮಾಣ ಈ ಕೆಳಕಂಡಂತ್ತಿರುತ್ತದೆ. |

| ಕ್ರ. ಸಂ. | ವಿದ್ಯುತ್ತಿನ ಮೂಲಗಳು | ವಿದ್ಯುತ್ ಲಭ್ಯತೆ 2024-25 (ಏಪ್ರಿಲ್-24 ರಿಂದ ಮೇ -24 ರ ಅಂತ್ಯದವರೆಗೆ) ಮಿ.ಯೂ.ಗಳಲ್ಲಿ (ತಾತ್ಕಾಲಿಕ) |
|---|---|---|
| 1) | ಜಲ ವಿದ್ಯುತ್ | 1101.34 |
| 2) | ಶಾಖೋತ್ಪನ್ನ (ಉಷ್ಣ ವಿದ್ಯುತ್) | 4020.17 |
| 3) | ಪವನ ವಿದ್ಯುತ್ | 1137.34 |
| 4) | ಸೌರ ವಿದ್ಯುತ್ | 1992.45 |
| 5) | ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು | 7454.49 |
| 6) | **ಇತರೆ ಮೂಲಗಳಿಂದ:**<br>ಕ್ಯಾಪ್ಟಿವ್<br>ಹೈಡಲ್<br>ಮಿನಿ ಹೈಡಲ್<br>ಕೋ- ಜನರೇಷನ್<br>ಬಯೋಮಾಸ್<br>ಹೈಬ್ರಿಡ್ (Wind + sol r) | <br>71.02<br>0.79<br>50.63<br>186.03<br>1.41<br>225.43 |
| 7) | ಬೃಹತ್ ಐ.ಪಿ.ಪಿ. | 1174.66 |
| 8) | ಜಿಂದಾಲ್ | 102.30 |
| | **ಒಟ್ಟು** | **17518.06** |

| | | |
|---|---|---|
| ಆ) | ವಿದ್ಯುತ್ ಸ್ವಾವಲಂಬನೆಗಾಗಿ ರಾಜ್ಯದಲ್ಲಿಯೇ ವಿದ್ಯುತ್ ಉತ್ಪಾದಿಸಲು ಯಾವ ಹೊಸ ಹೊಸ ಯೋಜನೆಗಳನ್ನು ಪ್ರಾರಂಭಿಸಲಾಗಿದೆ; (ವಿವರ ನೀಡುವುದು) | ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ ಮುಂಬರುವ ಯೋಜನೆಗಳು ಮತ್ತು ನಿರೀಕ್ಷಿತ ಕಾರ್ಯಾರಂಭಗೊಳಿಸುವ ವರ್ಷದ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.<br>ಕ್ರೆಡಲ್ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.<br>➢ ಪ್ರಾಯೋಗಿಕವಾಗಿ ಪಾವಗಡ ಸೋಲಾರ್ ಪಾರ್ಕ್‌ನಲ್ಲಿ 2 MW/4.5 MWhr ಸಾಮರ್ಥ್ಯದ ಬ್ಯಾಟರಿ ಶೇಖರಣೆ ವ್ಯವಸ್ಥೆಯನ್ನು ಹೊಂದಿದ ಘಟಕವನ್ನು ಸ್ಥಾಪಿಸಲಾಗುತ್ತಿದೆ. ಸದರಿ ಘಟಕವನ್ನು ಸೆಪ್ಟೆಂಬರ್ 2024 ರಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಿದೆ. |
| ಇ) | ಈ ಯೋಜನೆಗಳು ಪೂರ್ಣಗೊಂಡು ರಾಜ್ಯವು ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆಯಾಗುವುದು ಯಾವಾಗ? | |

ಪಾವಗಡ ತಾಲ್ಲೂಕಿನ Ryapte ಗ್ರಾಮದಲ್ಲಿ 2000 MW ಸಾಮರ್ಥ್ಯದ RE ಪಾರ್ಕ್ ಸ್ಥಾಪನೆ. ಸದರಿ ಪಾರ್ಕ್‌ನ್ನು ಮಾರ್ಚ್ 2027 ರಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಿದೆ.

- ಪಾವಗಡ ಸೋಲಾರ್ ಪಾರ್ಕ್‌ನಲ್ಲಿ 300 MW ವಿಕೇಂದ್ರಿಕೃತ ಸೌರ ವಿದ್ಯುತ್ ಯೋಜನೆಯ ಸ್ಥಾಪನೆ. ಸದರಿ ಯೋಜನೆಯು ಜನವರಿ 2026 ರಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಿದೆ.
- ಕಲಬುರ್ಗಿಯಲ್ಲಿ 100MW ಸೋಲಾರ್ /100 MWhr (BESS) ಸ್ಥಾಪನೆ. ಸದರಿ ಯೋಜನೆಯು ಏಪ್ರಿಲ್ 2026 ರಲ್ಲಿ ಅನುಷ್ಠಾನಗೊಳ್ಳಲಿದೆ.
- ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ 500 MW ಸೋಲಾರ್ ಪಾರ್ಕ್ ಸ್ಥಾಪನೆ.
- ಪ್ರತಿ ಎಸ್ಕಾಂ ವ್ಯಾಪ್ತಿಯ ಆಯ್ದ ಒಂದು ಹಿಂದುಳಿದ ಗ್ರಾಮದಲ್ಲಿ ಪ್ರಾಯೋಗಿಕವಾಗಿ ಮೈಕ್ರೋಗ್ರಿಡ್ ವ್ಯವಸ್ಥೆಯ (Mirogrid) ಮೂಲಕ ಬ್ಯಾಟರಿ ಶೇಖರಣೆಯನ್ನು ಹೊಂದಿದ 500 kw ಸಾಮರ್ಥ್ಯದ ಸೌರ ಘಟಕದ ಸ್ಥಾಪನೆ.
- PM-KUSUM-B ಯೋಜನೆಯಡಿ ಜಾಲಮುಕ್ತ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗುತ್ತಿದ್ದು, ಇದರಿಂದ 150 ಮೆ.ವ್ಯಾ ಸಾಮರ್ಥ್ಯದ ಸೌರ ಘಟಕಗಳನ್ನು ಸ್ಥಾಪಿಸಲಾಗುವುದು
- PM-KUSUM-C ಯೋಜನೆಯಡಿ ಹಂತ-1 ರಲ್ಲಿ 1302 ಮೆ.ವ್ಯಾ ಸಾಮರ್ಥ್ಯದ ಸೌರ ಯೋಜನೆ ಮತ್ತು ಹಂತ-2 ರಲ್ಲಿ 1192 ಮೆ.ವ್ಯಾ ಸಾಮರ್ಥ್ಯದ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.

ಇದನ್ನು ಹೊರತುಪಡಿಸಿ ಮೂರನೇ ವ್ಯಕ್ತಿ ಮಾರಾಟ, ಸ್ವಯಂ ಬಳಕೆ, ಸಮೂಹ ಸ್ವಯಂ ಬಳಕೆ ವರ್ಗ ಮತ್ತು ಖಾಸಗಿ ಸೌರ ಪಾರ್ಕ್‌ದಡಿ ಸೌರ ವಿದ್ಯುತ್ ಯೋಜನೆಗಳನ್ನು ಖಾಸಗಿ / ಸರ್ಕಾರಿ ಸಂಸ್ಥೆಗಳು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ.

ಸಂಖ್ಯೆ: ಎನರ್ಜಿ 168 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು

ಅನುಬಂಧ--

**ಕವಿನಿನಿಯ ಮುಂಬರುವ ಯೋಜನೆಗಳು ಮತ್ತು ನಿರೀಕ್ಷಿತ ಕಾರ್ಯಾರಂಭಗೊಳಿಸುವ ವರ್ಷದ ವಿವರಗಳು ಈ ಕೆಳಕಂಡಂತಿವೆ:**

| ನಿರೀಕ್ಷಿತ ವರ್ಷ | ಕವಿನಿನಿಯ ಮುಂಬರುವ ಯೋಜನೆಗಳು | MW |
| --- | --- | --- |
| 2024-25 | ಯಲಹಂಕ ಅನಿಲಾಧಾರಿತ ವಿದ್ಯುತ್ ಯೋಜನೆ | 370 |
| | ವೇಸ್ಟ್ ಟು ಎನರ್ಜಿ ವಿದ್ಯುತ್ ಯೋಜನೆ | 11.5 |
| 2025-26 | KPCL ಥರ್ಮಲ್ ಪ್ಲಾಂಟ್ಸ್ (Bidadi ,RTPS, YTPS & BTPS) ಆವರಣದಲ್ಲಿ ಭೂಸ್ಥಾಪಿತ ಸೌರ ಯೋಜನೆ | 58 |
| | | 40 |
| | | 50 |
| | | 22 |
| | ತೇಲುವ ಸೌರ ಯೋಜನೆ | 100 |
| 2026-27 | ತೇಲುವ ಸೌರ ಯೋಜನೆ –I | 200 |
| 2027-28 | ತೇಲುವ ಸೌರ ಯೋಜನೆ - II | 400 |
| 2028-29 | ಗೋದ್ನಾ ಶಾಖೋತ್ಪನ್ನ ವಿದ್ಯುತ್ ಯೋಜನೆ | 1600 |
| 2029-30 | ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ | 2000 |
| 2030-31 | ವರಾಹಿ ಪಂಪ್ಡ್ ಸ್ಟೋರೇಜ್ ಯೋಜನೆ | 1500 |
| 2031-32 | ನೇತ್ರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ -I | 1500 |
| 2032-33 | ನೇತ್ರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ -II | 2500 |
| **ಒಟ್ಟು** | | **10351.5** |